All India Radio: Bangalore
National Bulletin In Kannada
31.12.2025 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<>><><*><><<>

ಮುಖ್ಯಾಂಶಗಳು

೧. ಸುಧಾರಣಾ ಪಥದಲ್ಲಿ ಮುನ್ನುಗ್ಗುತ್ತಿರುವ ಭಾರತ ಜಾಗತಿಕ ಗಮನದ ಕೇಂದ್ರಬಿಂದುವಾಗಿದೆ - ಪ್ರಧಾನಿ ನರೇಂದ್ರ ಮೋದಿ

೨. ಕಾಶಿ ಮತ್ತು ತಮಿಳುನಾಡು ಬಾಂಧವ್ಯ ಗಾಢಗೊಳಿಸುವ ಕಾಶಿ ತಮಿಳು ಸಂಗಮಂ ೪.೦ ಕಾರ್ಯಕ್ರಮಕ್ಕೆ ರಾಮೇಶ್ವರಂನಲ್ಲಿ ತೆರೆ

೩. ಕೇಂದ್ರ ಶಿಕ್ಷಣ ಸಚಿವಾಲಯದಿಂದ 'ಪಿಎಂ-ಯುವ ೩.೦' ಸ್ಪರ್ಧೆಯ ಫಲಿತಾಂಶ ಪ್ರಕಟ

೪. ಢಾಕಾದಲ್ಲಿಂದು ಬಾಂಗ್ಲಾದೇಶ ಮಾಜಿ ಪ್ರಧಾನಿ ಖಲೀದಾ ಜಿಯಾ ಅಂತ್ಯಕ್ರಿಯೆಯಲ್ಲಿ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಭಾಗಿ

೫. ಐದು ಪಂದ್ಯಗಳ ಮಹಿಳಾ ಟಿ-೨೦ ಕ್ರಿಕೆಟ್ ಸರಣಿ; ಶ್ರೀಲಂಕಾ ವಿರುದ್ಧ ಕ್ಲೀನ್ ಸ್ವೀಪ್ ಸಾಧಿಸಿದ ಭಾರತ

<>><><*><><<>

ಸುಧಾರಣಾ ಪಥದಲ್ಲಿ ಮುನ್ನುಗ್ಗುತ್ತಿರುವ ಭಾರತ ಜಾಗತಿಕ ಗಮನದ ಕೇಂದ್ರಬಿಂದುವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ಲೇಖನವೊಂದರಲ್ಲಿ ಅವರು, ಜಗತ್ತು ಭಾರತವನ್ನು ಭರವಸೆ ಮತ್ತು ವಿಶ್ವಾಸದಿಂದ ನೋಡುತ್ತಿದೆ ಎಂದಿದ್ದಾರೆ. ದೇಶದಲ್ಲಿ ಮುಂದಿನ ಪೀಳಿಗೆಯ ಸುಧಾರಣೆಗಳೊಂದಿಗೆ ಸಾಧಿಸಲಾಗುತ್ತಿರುವ ಪ್ರಗತಿಯ ವೇಗವನ್ನು ಜಗತ್ತು ಮೆಚ್ಚುತ್ತಿದೆ. ಈ ಸುಧಾರಣಾ ಪಥದ ಪ್ರಾಥಮಿಕ ಚಾಲಕಶಕ್ತಿ ಭಾರತದ ಜನಸಂಖ್ಯಾಬಲ, ಅದರ ಯುವ ಪೀಳಿಗೆ ಮತ್ತು ದೇಶವಾಸಿಗಳ ಅದಮ್ಯ ಮನೋಭಾವವಾಗಿದೆ ಎಂದು ಹೇಳಿದರು. ೨೦೨೫ ಸುಧಾರಣೆಗಳ ವರ್ಷವೆಂದು ಬಣ್ಣಿಸಿದ ಪ್ರಧಾನಿ, ಇದು ದೇಶದ ಬೆಳವಣಿಗೆಯ ಪ್ರಯಾಣಕ್ಕೆ ಹೊಸ ಶಕ್ತಿ ನೀಡಿದೆ. ಸರ್ಕಾರ, ಸಂಸ್ಥೆಗಳನ್ನು ಆಧುನೀಕರಿಸಿದೆ, ಆಡಳಿತವನ್ನು ಸರಳೀಕರಿಸಿದೆ ಮತ್ತು ದೀರ್ಘಕಾಲೀನ, ಅಂತರ್ಗತ ಬೆಳವಣಿಗೆಗೆ ಅಡಿಪಾಯವನ್ನು ಬಲಪಡಿಸಿದೆ ಎಂದು ಅವರು ಹೇಳಿದರು.

<>><><*><><<>

ಕಾಶಿ ಮತ್ತು ತಮಿಳುನಾಡು ಬಾಂಧವ್ಯ ಗಾಢಗೊಳಿಸುವ ಕಾಶಿ ತಮಿಳು ಸಂಗಮಂ ೪.೦ ಕಾರ್ಯಕ್ರಮಕ್ಕೆ ರಾಮೇಶ್ವರಂನಲ್ಲಿ ತೆರೆ ಬಿದ್ದಿದೆ. ನಿನ್ನೆ ನಡೆದ ಸಮಾರೋಪ ಸಮಾರಂಭದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಅವರು, ಕಾಶಿ ಮತ್ತು ತಮಿಳುನಾಡು ನಡುವಿನ ಬಾಂಧವ್ಯವು ಕೇವಲ ಐತಿಹಾಸಿಕವಲ್ಲ, ಬದಲಾಗಿ ಸಾವಿರಾರು ವರ್ಷಗಳಿಂದ ಭಾರತವನ್ನು ಒಂದುಗೂಡಿಸಿದ ಆಳವಾದ ನಾಗರಿಕತೆ ಮತ್ತು ಆಧ್ಯಾತ್ಮಿಕ ನಿರಂತರತೆಯಾಗಿದೆ.

ಇಂತಹ ವಿನಿಮಯಗಳು ಭಾರತದ ಹಂಚಿಕೆಯ ಪರಂಪರೆಯನ್ನು ಪುನರುಚ್ಚರಿಸುತ್ತವೆ ಮತ್ತು ರಾಷ್ಟ್ರೀಯ ಏಕೀಕರಣದ ಅರ್ಥವನ್ನು ಗಾಢವಾಗಿಸುತ್ತವೆ ಎಂದರು. ಮಹಾಕವಿ ಸುಬ್ರಮಣ್ಯ ಭಾರತಿಯವರ ಮಾತುಗಳನ್ನು ಉಲ್ಲೇಖಿಸಿ, ಉಪರಾಷ್ಟ್ರಪತಿಗಳು, ಕಾಶಿ ತಮಿಳು ಸಂಗಮವು ಕವಿಯ ಏಕೀಕೃತ, ಸಮಗ್ರ ಮತ್ತು ಆತ್ಮವಿಶ್ವಾಸದ ಭಾರತದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ ಎಂದು ನುಡಿದರು.

<>><><*><><<>

ದೇಶಾದ್ಯಂತ ಯುವ ಲೇಖಕರಿಗೆ ಮಾರ್ಗದರ್ಶನ ನೀಡುವ 'ಪಿಎಂ-ಯುವ ೩.೦' ಯೋಜನೆಯಡಿಯಲ್ಲಿ ಸ್ಪರ್ಧೆಯ ಫಲಿತಾಂಶಗಳನ್ನು ಕೇಂದ್ರ ಶಿಕ್ಷಣ ಸಚಿವಾಲಯ ಪ್ರಕಟಿಸಿದೆ. ಈ ಆವೃತ್ತಿಯಡಿಯಲ್ಲಿ, ೨೨ ಭಾರತೀಯ ಭಾಷೆಗಳು ಮತ್ತು ಇಂಗ್ಲಿಷ್‌ನಲ್ಲಿ ೪೩ ಪುಸ್ತಕ ಪ್ರಸ್ತಾವನೆಗಳನ್ನು ಆಯ್ಕೆ ಮಾಡಲಾಗಿದೆ. ಆಯ್ದ ಪುಸ್ತಕ ಪ್ರಸ್ತಾವನೆಗಳನ್ನು ಆರು ತಿಂಗಳ ಕಾಲ ಪ್ರಖ್ಯಾತ ವಿದ್ವಾಂಸರ ಮಾರ್ಗದರ್ಶನದಲ್ಲಿ ಪುಸ್ತಕಗಳಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ. ಆಯ್ಕೆಯಾದ ಪ್ರತಿಯೊಬ್ಬ ಲೇಖಕರು ತಿಂಗಳಿಗೆ ಐವತ್ತು ಸಾವಿರ ರೂಪಾಯಿಗಳ ವಿದ್ಯಾರ್ಥಿವೇತನ ಮತ್ತು ಅವರ ಪ್ರಕಟಿತ ಪುಸ್ತಕದ ಮೇಲೆ ೧೦ ಪ್ರತಿಶತದಷ್ಟು ಆಜೀವ ಗೌರವ ಧನವನ್ನು ಪಡೆಯುತ್ತಾರೆ ಎಂದು ಸಚಿವಾಲಯ ತಿಳಿಸಿದೆ. ದೇಶ - ವಿದೇಶಗಳಲ್ಲಿ ಭಾರತದ ಸಾಹಿತ್ಯ ಮತ್ತು ಚಿಂತನೆಯನ್ನು ಪ್ರತಿನಿಧಿಸಲು ಹೊಸ ಪೀಳಿಗೆಯ ಬರಹಗಾರರನ್ನು ಪೋಷಿಸುವ ಉದ್ದೇಶದಿಂದ 'ಪಿಎಂ-ಯುವ ೩.೦' ಅಡಿಯಲ್ಲಿ ಪುಸ್ತಕಗಳ ಮೊದಲ ಸೆಟ್ ಅನ್ನು ಮುಂದಿನ ವರ್ಷ ಪ್ರಕಟಿಸಲಾಗುವುದು.

<>><><*><><<>

ನವದೆಹಲಿಯ ನೀತಿ ಆಯೋಗದಲ್ಲಿ ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಮತ್ತು ತಜ್ಞರ ಗುಂಪಿನೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಂವಾದ ನಡೆಸಿದರು. 'ಆತ್ಮನಿರ್ಭರ ಮತ್ತು ರಚನಾತ್ಮಕ ಪರಿವರ್ತನೆ: ವಿಕಸಿತ ಭಾರತಕ್ಕಾಗಿ ಕಾರ್ಯಸೂಚಿ' ಎಂಬುದು ಸಂವಾದದ ವಿಷಯವಾಗಿತ್ತು. ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ೨೦೪೭ ರೆಡೆಗೆ ಭಾರತದ ಪಯಣದ ಪ್ರಮುಖ ಸ್ತಂಭಗಳ ಕುರಿತು ವಿವರಿಸಿದರು. ೨೦೪೭ ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತದ ದೃಷ್ಟಿಕೋನ, ಸರ್ಕಾರಿ ನೀತಿಗಳನ್ನೂ ಮೀರಿ ನಿಜವಾದ ಸಾಮೂಹಿಕ ಆಕಾಂಕ್ಷೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

<>><><*><><<>

'ದಿ ಸ್ಮಾರ್ಟ್ ಸೀ ಪ್ರಾಜೆಕ್ಟ್' ಎಂಬ ಯೋಜನೆಗಾಗಿ, ಕೇಂದ್ರ ಸರ್ಕಾರವು ಇಂಡೋ-ಕೆನಡಾ ಸಹಯೋಗದ ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಗೋವಾ ಮೂಲದ ಖಾಸಗಿ ಸಾಗರ ಕಂಪನಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ದೇಶದ ಪರಿಸರ ಸ್ನೇಹಿ ಜಲಮಾರ್ಗಗಳ ವಿಶಾಲ ಉದ್ದೇಶಗಳಿಗೆ ಕೊಡುಗೆ ನೀಡುವ ನಿಟ್ಟಿನಲ್ಲಿ ಈ ಯೋಜನೆಯು ೨೦ ಪ್ರಯಾಣಿಕ ವಿದ್ಯುತ್ ದೋಣಿಯ ಅಭಿವೃದ್ಧಿ ಮತ್ತು ಪ್ರದರ್ಶನದ ಗುರಿ ಹೊಂದಿದೆ ಎಂದು ತಿಳಿಸಿದೆ. ಇದು ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಈ ಉಪಕ್ರಮವು ಕಡಿಮೆ ಹೊರಸೂಸುವಿಕೆ, ಕನಿಷ್ಠ ಶಬ್ದ ಮತ್ತು ಸುಧಾರಿತ ಕಾರ್ಯಾಚರಣೆಯ ದಕ್ಷತೆಯೊಂದಿಗೆ ಶುದ್ಧ ಒಳನಾಡು ಮತ್ತು ಕರಾವಳಿ ಜಲ ಸಾರಿಗೆಗಾಗಿ ತಂತ್ರಜ್ಞಾನ ವೇದಿಕೆಯನ್ನು ರಚಿಸಲು ಸಹಾಯ ಮಾಡುತ್ತದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

<>><><*><><<>

ಢಾಕಾದಲ್ಲಿಂದು ನಡೆಯಲಿರುವ ಬಾಂಗ್ಲಾದೇಶದ ಮಾಜಿ ಪ್ರಧಾನಿ ಮತ್ತು ಬಿಎನ್‌ಪಿ ಅಧ್ಯಕ್ಷೆ ಖಲೀದಾ ಜಿಯಾ ಅವರ ಅಂತ್ಯಕ್ರಿಯೆಯಲ್ಲಿ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಭಾಗವಹಿಸಲಿದ್ದಾರೆ. ಡಾ.ಎಸ್.ಜೈಶಂಕರ್ ಅವರು ಅಂತ್ಯಕ್ರಿಯೆಯಲ್ಲಿ ಭಾರತ ಸರ್ಕಾರ ಮತ್ತು ಜನರನ್ನು ಪ್ರತಿನಿಧಿಸಲಿದ್ದಾರೆ. ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿಯಾಗಿದ್ದ ಖಲೀದಾ ಜಿಯಾ ನಿನ್ನೆ ಢಾಕಾದಲ್ಲಿ ನಿಧನರಾದರು. ಅವರಿಗೆ ೮೦ ವರ್ಷ ವಯಸ್ಸಾಗಿತ್ತು.

<>><><*><><<>

'ದೆಹಲಿ ಜನ ವಿಶ್ವಾಸ್ ತಿದ್ದುಪಡಿ ಮಸೂದೆ- ೨೦೨೬' ಅನ್ನು ದೆಹಲಿ ಸರ್ಕಾರ ಅನುಮೋದಿಸಿದೆ. ದೆಹಲಿ ಸಚಿವ ಸಂಪುಟವು ಅನುಮೋದಿಸಿದ ಮಸೂದೆಯು ಅನುಸರಣೆ ಕಾರ್ಯವಿಧಾನಗಳನ್ನು ಸರಳೀಕರಿಸುವುದು ಮತ್ತು ಸಣ್ಣ ಉಲ್ಲಂಘನೆಗಳನ್ನು ಅಪರಾಧ ಮುಕ್ತಗೊಳಿಸುವುದು, ನ್ಯಾಯಾಲಯಗಳಲ್ಲಿನ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಮತ್ತು ಆಡಳಿತಾತ್ಮಕ ದಕ್ಷತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ದೆಹಲಿಯ ಮುಖ್ಯಮಂತ್ರಿ ರೇಖಾ ಗುಪ್ತಾ ತಿಳಿಸಿದ್ದಾರೆ.

<>><><*><><<>

ಮುಂಬರುವ ವಂದೇ ಭಾರತ್ ಸ್ಲೀಪರ್ ರೈಲಿನ ಪ್ರಾಯೋಗಿಕ ಸಂಚಾರವನ್ನು ನಿನ್ನೆ ಆಯುಕ್ತರು ನಡೆಸಿರುವುದಾಗಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಪ್ರಾಯೋಗಿಕ ಸಂಚಾರದ ವೀಡಿಯೊವನ್ನು ಹಂಚಿಕೊಂಡಿರುವ ಸಚಿವರು, ಕೋಟಾ ನಾಗ್ಡಾ ವಿಭಾಗದ ನಡುವೆ ಪ್ರಾಯೋಗಿಕ ಸಂಚಾರವನ್ನು ನಡೆಸಲಾಗಿದ್ದು, ಇದರಲ್ಲಿ ರೈಲು ಗಂಟೆಗೆ ೧೮೦ ಕಿಲೋಮೀಟರ್ ವೇಗದಲ್ಲಿ ಚಲಿಸಿದೆ ಎಂದು ಹೇಳಿದ್ದಾರೆ. ರೈಲಿನೊಳಗೆ ಇರಿಸಲಾದ ನೀರಿನ ಲೋಟಗಳು ಈ ವೇಗದಲ್ಲಿ ಸಂಪೂರ್ಣವಾಗಿ ಸ್ಥಿರವಾಗಿವೆ. ನೀರಿನ ಪರೀಕ್ಷೆಯು ಈ ಹೊಸ ಪೀಳಿಗೆಯ ರೈಲಿನ ತಾಂತ್ರಿಕ ವೈಶಿಷ್ಟ್ಯಗಳನ್ನು ಪ್ರದರ್ಶಿಸಿದೆ ಎಂದು ಅವರು ಹೇಳಿದರು.

<>><><*><><<>

ಉತ್ತರ ಪ್ರದೇಶದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ-ಎಸ್‌ಐಆರ್ ವೇಳಾಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಪರಿಷ್ಕರಿಸಿದೆ. ಸಾಮಾಜಿಕ ಮಾಧ್ಯಮದಲ್ಲಿ ಈ ಕುರಿತು ಮಾಹತಿ ಹಂಚಿಕೊಂಡಿರು ಉತ್ತರ ಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿ ನವದೀಪ್ ರಿನ್ವಾ, ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ, ಕರಡು ಮತದಾರರ ಪಟ್ಟಿಯನ್ನು ೨೦೨೬ ಜನವರಿ ೬ ರಂದು ಪ್ರಕಟಿಸಲಾಗುವುದು ಎಂದು ತಿಳಿಸಿದ್ದಾರೆ. ಈ ಹಿಂದಿನ ವೇಳಪಟ್ಟಿಯ ಪ್ರಕಾರ ಕರಡು ಮತದಾರರ ಪಟ್ಟಿಯನ್ನು ಇಂದು ಪ್ರಕಟಿಸಲು ನಿರ್ಧರಿಸಲಾಗಿತ್ತು. ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ, ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸುವ ಅವಧಿ ಬರುವ ಜನವರಿ ೬ ರಿಂದ ಫೆಬ್ರವರಿ ೬ ರವರೆಗೆ ತೆರೆದಿರುತ್ತದೆ. ಉತ್ತರ ಪ್ರದೇಶದ ಅಂತಿಮ ಮತದಾರರ ಪಟ್ಟಿಯನ್ನು ಮಾರ್ಚ್ ೬ ರಂದು ಪ್ರಕಟಿಸಲಾಗುವುದು. ಈ ತಿಂಗಳ ೨೬ ರಂದು ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಯು ಮುಕ್ತಾಯಗೊಂಡಿದೆ ಎಂದು ಅವರು ಮಾಹಿತಿ ನೀಡಿದರು.

<>><><*><><<>

ತಿರುವನಂತಪುರದಲ್ಲಿ ನಿನ್ನೆ ರಾತ್ರಿ ನಡೆದ ಐದನೇ ಮತ್ತು ಅಂತಿಮ ಟಿ-೨೦ ಅಂತಾರಾಷ್ಟ್ರೀಯ ಮಹಿಳಾ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡ ಶ್ರೀಲಂಕಾ ತಂಡವನ್ನು ೧೫ ರನ್‌ಗಳಿಂದ ಮಣಿಸಿದೆ.  ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ ೨೦ ಓವರ್‌ಗಳಲ್ಲಿ ೭ ವಿಕೆಟ್‌ಗಳ ನಷ್ಟಕ್ಕೆ ೧೭೫ ರನ್ ಗಳಿಸಿ, ಶ್ರೀಲಂಕಾ ತಂಡಕ್ಕೆ ೧೭೬ ರನ್‌ಗಳ ಗುರಿ ನೀಡಿತು. ಪ್ರತ್ಯುತ್ತರವಾಗಿ ಶ್ರೀಲಂಕಾ ನಿಗದಿತ ಓವರ್‌ಗಳಲ್ಲಿ ಏಳು ವಿಕೆಟ್‌ಗಳ ನಷ್ಟಕ್ಕೆ ೧೬೦ ರನ್‌ಗಳಿಸಲಷ್ಟೇ ಶಕ್ತವಾಯಿತು. ಹರ್ಮನ್‌ಪ್ರೀತ್ ಕೌರ್ ಅವರಿಗೆ ಪಂದ್ಯಶ್ರೇಷ್ಠ ಆಟಗಾರ್ತಿ ಹಾಗೂ ಶಫಾಲಿ ವರ್ಮಾ ಅವರಿಗೆ ಸರಣಿಶ್ರೇಷ್ಠ ಆಟಗಾರ್ತಿ ಪ್ರಶಸ್ತಿ ನೀಡಲಾಯಿತು. ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡವು, ಐದು ಪಂದ್ಯಗಳ ಸರಣಿಯನ್ನು ಕ್ಲೀನ್ ಸ್ವೀಪ್ ಮಾಡಿದೆ.

<>><><*><><<>

ಬೆಂಗಳೂರಿನಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ -ಎಚ್‌ಎಎಲ್ ಹೆಲಿಕಾಪ್ಟರ್ ವಿಭಾಗದಲ್ಲಿ ಧ್ರುವ್ ಎನ್‌ಜಿ ಸಿವಿಲ್ ವೇರಿಯಂಟ್ ಹೆಲಿಕಾಪ್ಟರ್‌ನ ಉದ್ಘಾಟನಾ ಹಾರಾಟಕ್ಕೆ ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ನಿನ್ನೆ ಚಾಲನೆ ನೀಡಿದರು.  ಮುಂದಿನ ಪೀಳಿಗೆಯ ಈ ಅತ್ಯಾಧುನಿಕ ಲಘು ಹೆಲಿಕಾಪ್ಟರ್ ಅನ್ನು ಎಚ್.ಎ.ಎಲ್ ಸಂಸ್ಥೆ ಅಭಿವೃದ್ಧಿಪಡಿಸಿದ್ದು, ಅದನ್ನು ಈ ವರ್ಷದ ಆರಂಭದಲ್ಲಿ ನಡೆದ ಏರ್ ಶೋ ೨೦೨೫ರಲ್ಲಿ ಪ್ರದರ್ಶಿಸಲಾಗಿತ್ತು.  ೬ ರಿಂದ ೧೪ ಪ್ರಯಾಣಿಕರ ಸಾಮರ್ಥ್ಯದ ಈ ಹೆಲಿಕಾಪ್ಟರ್ ಅನ್ನು ಪ್ರವಾಸೋದ್ಯಮ, ಗಣ್ಯರ ಪ್ರವಾಸ, ವಿಪತ್ತು ಮತ್ತು ಪ್ರವಾಹ ನಿರ್ವಹಣೆ ಮತ್ತಿತರ ಕಾರ್ಯಗಳಿಗೆ ಬಳಸಬಹುದಾಗಿದೆ. ಈ ಹೆಲಿಕಾಪ್ಟರ್, ಸ್ವದೇಶಿ, ಶಕ್ತಿ ಇಂಜಿನ್ ಹೊಂದಿದೆ. ಜೊತೆಗೆ ಹಲವು ಆಧುನಿಕ ಸೌಕರ್ಯಗಳನ್ನು ಇದು ಒಳಗೊಂಡಿದ್ದು, ಗರಿಷ್ಠ ೨೮೫ ಕಿಲೋಮೀಟರ್ ವೇಗದಲ್ಲಿ ೬೩೦ ಕಿಲೋಮೀಟರ್ ದೂರವನ್ನು ಕ್ರಮಿಸಲಿದೆ. ಜೊತೆಗೆ ಇದು ೨ ಸಾವಿರದ ೩೩ ಕೆಜಿ ತೂಕವನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ  ><><<>